Works proposed to be taken up in Chickmagalur and Mudigere Taluks by P.W.D.

Q.—729. Sri A. M. BASAVE GOWDA (Chickmagalur).—

Will the Government be pleased to state:—

the number of P. W. D. works including projects proposed to be taken up in Chickmagalur and Mudigere taluks during the current year ?

A.—Sri H. K. VEERANNA GOWDH (Minister for Public Works).—

Twelve works in Chickmagalur taluk and eight works in Mudigere taluk.

ಶ್ರೀ ಎ. ಎಂ. ಬಸವೇಗೌಡ.—ನನ್ನ ಪ್ರಶ್ನೆಗೆ ಉತ್ತರವಾಗಿ ಚಿಕ್ಕಮಗಳೂರು ತಾಲ್ಲೂಕಿನಲ್ಲಿ 12, ಮೂಡಿಗೆರೆ ತಾಲ್ಲೂಕಿನಲ್ಲಿ ಎಂಟು ಕಾಂಗಾರಿಗಳನ್ನು ಕೈಕೊಳ್ಳಬೇಕೆಂದು ಉದ್ದೇಶಿಸಲಾಗಿದೆ ಎಂದು ಹೇಳುತ್ತೀರಿ. ಅವು ಯಾವುವು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಗಂಜಿ ಹಳ್ಳಕ್ಕೆ ಒಂದು ಕೆರೆ ಕಟ್ಟುವುದಕ್ಕೆ 30 ಸಾವಿರ ರೂಪಾಯಿ. ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಪ್ರವಾಸಿಮಂದಿರವನ್ನು ಬಡಾವಣೆ ಮಾಡುವುದಕ್ಕೆ 35 ಸಾವಿರ ರೂಪಾಯಿ, ಚಿಕ್ಕಮಗಳೂರಿನಲ್ಲಿ ಎ. ಕೆ. ಹಾಸ್ಟಲ್ ಬಡಾವಣೆ ಮಾಡುವುದಕ್ಕೆ 60 ಸಾವಿರ ರೂಪಾಯಿ, ಚಿಕ್ಕಮಗಳೂರಿನಲ್ಲಿ ಅಫೀಷಿಯಲ್ ಕ್ವಾರ್ಟರ್ಸ್ ಕಟ್ಟಿಸುವುದಕ್ಕೆ 36 ಸಾವಿರ ರೂಪಾಯಿ, ಚಿಕ್ಕಮಗಳೂರಿನಲ್ಲಿ ಕೊಡಿಗೆ ಹಳ್ಳಕ್ಕೆ ಒಂದು ಸೇತುವೆ ಕಟ್ಟಿಸುವುದಕ್ಕೆ 40 ಸಾವಿರ ರೂಪಾಯಿ, ಗೊಂಡೇಕಾರ್ ಜಾಗರಹೋಬಳಿಯಲ್ಲಿ ಹೊಸದಾಗಿ ರಸ್ತೆ ಮಾಡುವುದಕ್ಕೆ ಪಂದರವಳ್ಳಿಗೆ 40 ಸಾವಿರ ರೂಪಾಯಿ, ಚಿಕ್ಕಮಗಳೂರು ಮಲ್ಲೇಶ್ವರ್ ಹೈಸ್ಕೂಲ್ ಕಟ್ಟಿಸುವುದಕ್ಕೆ 1 ಲಕ್ಷದ ಐದು ಸಾವಿರ ರೂಪಾಯಿ, ಆಕ್ಯುಪೇಷನಲ್ ಇಂಸ್ಟಿಟ್ಯೂಟ್‌ಗೆ 50,000 ರೂಪಾಯಿ, ಚಿಕ್ಕಮಗಳೂರಿನಲ್ಲಿ ಜನರಲ್ ಹಾಸ್ಪಿಟಲ್‌ನ ಎಡ ಮತ್ತು ಬಲ ಪಕ್ಷಗಳಲ್ಲಿ ಬಡಾವಣೆ ಮಾಡುವುದಕ್ಕೆ 35,000 ರೂಪಾಯಿ, ಆಲೂರಿನಲ್ಲಿ ಕಂಬೈಂಡ್ ಡಿಸ್ಪೆನ್ಸರಿಗೆ 25,000 ರೂಪಾಯಿ, ಚಿಕ್ಕಮಗಳೂರಿನಲ್ಲಿ ಒಂದು ಜನರಲ್ ಹಾಸ್ಪಿಟಲ್ ಕಟ್ಟಿಸುವುದಕ್ಕೆ 3,00,000 ರೂಪಾಯಿ. ಮೆಟರ್‌ನಿಟಿ ಹಾಸ್ಪಿಟಲ್ ಕಟ್ಟಿಸುವುದಕ್ಕೆ 15,000 ರೂಪಾಯಿ ಮೆಡಿಕಲ್ ಸರ್ವಿಸ್‌ನವರು ತಿಳಿಸಿದ್ದಾರೆ. ಇಷ್ಟು ಚಿಕ್ಕ ಬೇಕೆಂದು ಮಂಗಳೂರು ತಾಲ್ಲೂಕಿನಲ್ಲಿ. ಮೂಡಿಗೆರೆ ತಾಲ್ಲೂಕಿನಲ್ಲಿ ಕೊಚೆ ಗ್ರಹಳ್ಳಿ ಹತ್ತಿರ ಅಣೆಕಟ್ಟು ವುದಕ್ಕೆ 28,000 ಸಾವಿರ ರೂಪಾಯಿ. ಕೆ ಟಿಗೆ ಹಾಳ್ ರಸ್ತೆ ಅಸ್‌ಫಾಲ್ಟ್ ಮಾಡುವುದಕ್ಕೆ 47,000 ರೂಪಾಯಿ ಮತ್ತು ಕಡೂರು-ಮಂಗಳೂರು ರಸ್ತೆಯಲ್ಲಿ ಒಂದರಿಂದ 71-74 ಮೈಲಿಗಳಲ್ಲಿ ಬೇರೆ ಬೇರೆ ಭಾಗಗಳಲ್ಲಿ ಅಸ್‌ಫಾಲ್ಟ್ ಮಾಡುವುದಕ್ಕೆ 67 ಸಾವಿರದ ನಾನೂರು, 94 ಸಾವಿರ 76 ಸಾವಿರ ರೂಪಾಯಿ, ಹೀಗೆ ಇದೆ. ಮೂಡಿಗೆರೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ ಕ್ವಾರ್ಟರ್ಸ್‌ಗೆ 11 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದೆ.

ಶ್ರೀ ಎ. ಎಂ. ಬಸವೇಗೌಡ.—ಹೋದ ವರ್ಷ ಮಂಜೂರಾದ ಅನೇಕ ಕೆಲಸಗಳು ಸೂಪರಿಂಟೆಂಡಿಂಗ್ ಇಂಜಿನಿಯರಿಂದ ವರ್ಕ್ ಆರ್ಡರ್ ಬಾರದೇ ಹಾಗೆಯೇ ನಿಂತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವ ಯಾವುದು ಯಾವ ಯಾವ ಸ್ಟೇಜ್‌ನಲ್ಲಿ ಇದೆ ಎಂದು ಹೇಳುವುದಕ್ಕೆ ಸಾಧ್ಯವಿದೆ. ಆದರೆ ವರ್ಕ್ ಆರ್ಡರ್ ಆಗಿಲ್ಲ ಎಂದು ತಾವು ಹೇಳುವುದು ಏನಿದೆ ಅದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಬಹಳ ಕ್ವೆರಿ ಹಾಕಿ ಕಳುಹಿಸುತ್ತಾರೆ. ಕೆಲವು ಕ್ಲಾರಿಕೇಷನ್ ಬೇಕು ಎಂದು ಹಿಂದಕ್ಕೆ ಕಳುಹಿಸುತ್ತಾರೆ. ಕೆಲವನ್ನು ಮಂಜೂರು ಮಾಡಬೇಕೆಂದು ಕಳುಹಿಸಿಕೊಟ್ಟಿದ್ದಾರೆ. ಕೆಲವನ್ನು ರಿವೈಸ್ ಮಾಡಬೇಕೆಂದು ಮೇಲಿನ ಆಫೀಸಿಗೆ ಕಳುಹಿಸಿದಾಗ ತಪ್ಪು ಇದ್ದರೆ, ಹೇಗೆ ಏನು ಎಂಬುದಾಗಿ ಕೇಳುತ್ತಾರೆ. ಹೀಗೆ ನಿಧಾನವಾಗಿದೆಯೇ ಹೊರತು ಈ ಎಲ್ಲಾ ಕೆಲಸಗಳನ್ನೂ ತೆಗೆದುಕೊಳ್ಳುತ್ತಾ ಇದ್ದಾರೆ.

ಶ್ರೀ ಎ. ಎಂ. ಬಸವೇಗೌಡ.—ಈ ವರ್ಷದ ಬಜೆಟ್‌ನಲ್ಲಿ ನೋಡಿದರೂ ಕೂಡ ಈ ಸಾಲಿನಲ್ಲಿ ಈ ಕೆಲಸಗಳಿಗೆ ಒದಗಿಸಿರುವ ಹಣ ಬಹಳ ಕಡಮೆ ಎಂದು ದನ್ನು ತಾವು ಒಪ್ಪುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾನು ಒಪ್ಪುವುದಿಲ್ಲ, ಅದು ತಮ್ಮ ಅಭಿಪ್ರಾಯ.

Bus Service from Chitaldrug to Shimoga

ಅಧ್ಯಕ್ಷರು.— ಪ್ರಶ್ನೆ 785. ಹಿಂದೆ 1361 ನೆಯ ಪ್ರಶ್ನೆ ಇದೇ ವಿಷಯಕ್ಕೆ ಸಂಬಂಧಪಟ್ಟದ್ದು ಬಂದಿತ್ತು, ಆದ್ದರಿಂದ ಇದನ್ನು ಕೇಳದೇ ಇರುವುದು ಒಳ್ಳೆಯದು. ಒಂದುಪೇಳೆ ಕೇಳಿದರೂ ಉಪ ಪ್ರಶ್ನೆಗಳಿಗೆ ಅವಕಾಶ ಸಿಕ್ಕುವುದಿಲ್ಲ.

Sri G. SIVAPPA.—I may bring to the notice of the Chair that the way in which my friend put the question on this subject and my putting the supplementaries are quite different. So, I may be permitted to put the question.

Sri G. DUGGAPPA.—The other day the answers given were not satisfactory. Now the chance has again come up. You may kindly allow us to exhaust all our supplementaries.

Q.—785. Sri G. SIVAPPA (Chitaldrug).—

Will the Government be pleased to state :—

(*a*) whether they were running Government buses from Chitaldrug to Shimoga :

(*b*) the period for which they were run on that route ;

(*c*) the reasons for discontinuing the same ?